# “ಮುಂದಿನ ದಾರಿ” ಯೋಜನೆ: ೨೦೧೫ರೊಳಗೆ ಕನ್ನಡನಾಡು ಸ್ವರ್ಗ!

*ಬಾ. ರಾ. ಕಿರಣ*
ಹಿರಿಯ ತಂತ್ರಜ್ಞಾನಿ
ಟೆಕ್ಸಾಸ್ ಇನ್ಸ್ಟ್ರುಮೆಂಟ್ಸ್, ಬೆಂಗಳೂರು
kiran.br@gmail.com

## ೧. ಮುಂದೆ ಹೆಜ್ಜೆಯಿಡುವ ಮುನ್ನ...

ಕನ್ನಡದಲ್ಲಿ ವಿಜ್ಞಾನ-ತಂತ್ರಜ್ಞಾನ ಶಿಕ್ಷಣವನ್ನು ತರದೆ ಬೇರೆ ದಾರಿಯಿಲ್ಲ ಎಂದು ನೀವು ನಂಬಿರುವಿರಾ? ಕನ್ನಡಿಗರು ಉನ್ನತ-ಶಿಕ್ಷಣವನ್ನು ಕನ್ನಡದಲ್ಲೇ ಪಡೆಯಬೇಕೆಂದು ನಂಬಿರುವಿರಾ? ಕನ್ನಡದಲ್ಲಿ ಕೇವಲ “ಜುಟ್ಟಿಗೆ ಮಲ್ಲಿಗೆ ಹೂ” ಸಾಹಿತ್ಯ ಮಾತ್ರ ಇದೆ ಎಂದು ನೊಂದಿರುವಿರಾ? ಕನ್ನಡದಲ್ಲಿ “ಹೊಟ್ಟೆಗೆ ಹಿಟ್ಟಿನ” ಸಾಹಿತ್ಯ ಇರಬೇಕೆಂದು ಕನಸು ಕಂಡಿರುವಿರಾ? ಕನ್ನಡದಲ್ಲಿ ಕೇವಲ ಕವಿತೆ-ಗಿವಿತೆ-ನಾಟಕ-ಗೀಟಕ-ಅಧ್ಯಾತ್ಮ-ಗಿಧ್ಯಾತ್ಮಗಳು ಮಾತ್ರ ಇರುವುದರಿಂದಲೇ ಕನ್ನಡಾಂಬೆ ದಿನೇ ದಿನೇ ಸಾಯುತ್ತಿದ್ದಾಳೆ ಎಂದು ನಂಬಿರುವಿರಾ? ಕನ್ನಡದಲ್ಲಿ ಏನಾದರೂ ಹೊಸ ವೈಜ್ಞಾನಿಕ, ತಾಂತ್ರಿಕ ಪದಗಳನ್ನು ನೀವೇ ಕಂಡುಹಿಡಿದು ಉಪಯೋಗಿಸಿದರೆ ಸುತ್ತಮುತ್ತಲ ಕನ್ನಡಿಗರು ನಗುವುದನ್ನು ಗಮನಿಸಿರುವಿರಾ? ಈ ನಗಾಟ ನಿಲ್ಲದ ವರೆಗೂ ಕನ್ನಡದ, ಕರ್ನಾಟಕದ, ಅದರ ಮೂಲಕ ಭಾರತ ಉದ್ಧಾರ ಸಾಧ್ಯವಿಲ್ಲ ಎಂದು ನಂಬಿರುವಿರಾ? ಉಪಯೋಗಕ್ಕೆ ಬಾರದ್ದನ್ನು ಹೇಳುವುದಕ್ಕೆ ಮಾತ್ರ ಕನ್ನಡ, ಉಪಯೋಗವಿರುವುದಕ್ಕೆಲ್ಲ ಆಂಗ್ಲಭಾಷೆ ಎಂದು ಕನ್ನಡಿಗರು ನಂಬಿರುವ ತನಕ ನಮ್ಮ ಉದ್ಧಾರವಿಲ್ಲ ಎಂದು ನಂಬಿರುವಿರಾ?

ಕನ್ನಡದಲ್ಲೇ ಅತ್ಯುನ್ನತ ಮಟ್ಟದ ವಿಜ್ಞಾನ-ತಂತ್ರಜ್ಞಾನಗಳ ತತ್ವಗಳನ್ನು ಕಲಿತರೆ ನಮಗವು ಮತ್ತಷ್ಟು ಹತ್ತಿರವಾಗುತ್ತವೆ, ಮತ್ತಷ್ಟು ಸುಲಭವಾಗುತ್ತವೆ ಎಂದು ನಂಬಿರುವಿರಾ? ಕನ್ನಡದಲ್ಲೇ ವಿಜ್ಞಾನ-ತಂತ್ರಜ್ಞಾನಗಳು ಕಲಿಯುವಂತಾದರೆ ಅವುಗಳ ವ್ಯಾಪ್ತಿ ಹೆಚ್ಚುತ್ತದೆ, ಅವುಗಳು ಮನೆಮಾತಾಗುತ್ತವೆ ಎಂದು ನಂಬಿರುವಿರಾ? ಆಗ ಮಾತ್ರ ನಾವು ವಿಶ್ವದಲ್ಲಿ ಸಮರ್ಥ ಜನತೆಯೆನಿಸಿಕೊಳ್ಳಬಲ್ಲೆವು ಎಂದು ನಂಬಿರುವಿರಾ? ಈಗ ನೂರಕ್ಕೆ ಎರಡು ಜನರಿಗೆ ಮಾತ್ರ ಎಟಕುತ್ತಿರುವ ವಿಜ್ಞಾನ-ತಂತ್ರಜ್ಞಾನ ಶಿಕ್ಷಣ ಕನ್ನಡದಲ್ಲೇ ಮೂಡಿಬಂದರೆ ನೂರಕ್ಕೆ ತೊಂಬತ್ತೆಂಟು ಜನರಿಗೆ ಎಟಕುತ್ತದೆ ಎಂದು ನಂಬಿರುವಿರಾ? ಹೀಗಾಗುವುದರಿಂದ ಮಾತ್ರ ಕನ್ನಡದ ಉದ್ಧಾರ ಸಾಧ್ಯ ಎಂದು ತಿಳಿದಿರುವಿರಾ?

ಆಂಗ್ಲಭಾಷೆಯಲ್ಲಿ ವಿಜ್ಞಾನ-ತಂತ್ರಜ್ಞಾನಗಳ ತತ್ವಗಳು ಕಲಿಯುವುದಕ್ಕಿಂತ ಕನ್ನಡದಲ್ಲಿ ಕಲಿಯುವುದೇ ಸುಲಭ ಎಂದು ನಂಬಿರುವಿರಾ? ಈಗ ಯಾವಯಾವ ಕನ್ನಡಿಗರಿಗೆ ಹಾಗನ್ನಿಸುವುದಿಲ್ಲವೋ ಅವರೆಲ್ಲ “ಕನ್ನಡದಲ್ಲಿ ವಿಜ್ಞಾನ-ತಂತ್ರಜ್ಞಾನ ಸಾಹಿತ್ಯವನ್ನು ರಚಿಸಲು ನಮ್ಮ ಕೈಯಲ್ಲಾಗುವುದಿಲ್ಲ” ಎಂದು ಸೋಲೊಪ್ಪಿಕೊಂಡವರು ಎಂದು ನಂಬಿರುವಿರಾ? ಕನ್ನಡದಲ್ಲಿ ವಿಜ್ಞಾನ-ತಂತ್ರಜ್ಞಾನಗಳಲ್ಲಿ ಆವಿಷ್ಕಾರಗಳಾಗುವಂತಾದರೆ ಕರ್ನಾಟಕದ ತೊಂದರೆಗಳಲ್ಲಿ ಬಹುಪಾಲು ಪರಿಹಾರವಾಗುತ್ತವೆ ಎಂದು ನಂಬಿರುವಿರಾ? ಉನ್ನತ ಶಿಕ್ಷಣ ಕನ್ನಡದಲ್ಲಿ ಎಲ್ಲಿಯವರೆಗೆ ಸಾಧ್ಯವಾಗುವುದಿಲ್ಲವೋ ಅಲ್ಲಿಯವರೆಗೆ ಕನ್ನಡಾಭಿಮಾನಿಗಳೂ ಕೂಡ ಕನ್ನಡಮಾಧ್ಯಮದ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳಿಸಲು ಹಿಂದೇಟಾಕುವುದು ಸರಿಯೇ ಎಂದು ನಂಬಿರುವಿರಾ? ಇದಕ್ಕೆ ಪರಿಹಾರ ಕನ್ನಡದಲ್ಲಿ ಉನ್ನತ ಶಿಕ್ಷಣ ಎಂದು ನಂಬಿರುವಿರಾ? ಇದು ಎಷ್ಟೇ ಕಷ್ಟವೆನಿಸಿದರೂ ಇದನ್ನು ಮಾಡದೆ ಬೇರೆ ದಾರಿಯಿಲ್ಲ ಎಂದು ನಂಬಿರುವಿರಾ? ಈ ನಿಟ್ಟಿನಲ್ಲಿ ಯಾವ ಪವಾಡವೂ ಆಗುವುದಿಲ್ಲ, ನಾವೇ ಕೆಲಸ ಮಾಡಬೇಕು ಎಂದು ನಂಬಿರುವಿರಾ?

ಇಲ್ಲಿಯವರೆಗೆ ಯಾವಯಾವ ಪ್ರಯತ್ನಗಳು ಈ ದಿಟ್ಟಿನಲ್ಲಿ ನಡೆದಿವೆಯೋ ಅವುಗಳೆಲ್ಲ ಅರೆಮನಸ್ಸಿನ ಪ್ರಯತ್ನಗಳಾಗಿವೆ ಎಂದು ತಿಳಿದಿರುವಿರಾ? ಸರ್ಕಾರವಾಗಲಿ ಮತ್ತೊಬ್ಬರಾಗಲಿ ಕನ್ನಡದಲ್ಲಿ *“ಏನೋ ನಮ್ಮ ಹಳ್ಳಿಯ ಮಕ್ಕಳಿಗೂ ಒಂದಿಷ್ಟು ವಿಜ್ಞಾನ ತಿಳಿಯಲಿ”* ಎಂದು ಕನಸು ಕಾಣುವಾಗಲೂ ಚೌಕಾಸಿ ಮಾಡಿಕೊಂಡಿದ್ದಾರೆ ಎಂದು ತಿಳಿದಿರುವಿರಾ? ಅದರ ಬದಲು **“ಇಡೀ ವಿಶ್ವದಲ್ಲೇ ಹೆಸರುವಾಸಿಯಾದಂತಹ ಕನ್ನಡ ವಿಜ್ಞಾನಿಗಳನ್ನೂ ತಂತ್ರಜ್ಞಾನಿಗಳನ್ನೂ ಹುಟ್ಟಿಸೋಣ, ವಿಶ್ವವಿಖ್ಯಾತ ಕನ್ನಡ ತಾಂತ್ರಿಕ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸೋಣ, ಕನ್ನಡಿಗರು ಕನ್ನಡದಲ್ಲೇ ತಮ್ಮ ಸಂಶೋಧನೆಗಳನ್ನು ಪ್ರಕಟಿಸಲಿ, ವಿಶ್ವದೆಲ್ಲೆಡೆಯಿಂದ ಜನರು ನಮ್ಮ ವಿಜ್ಞಾನ-ತಂತ್ರಜ್ಞಾನಗಳನ್ನು ಕಲಿಯಲು ಕನ್ನಡವನ್ನು ಕಲಿತುಕೊಳ್ಳುವಂತಾಗಲಿ”**

ಎಂದು ಕನಸು ಕಾಣಬೇಕಿತ್ತು ಎಂದು ತಿಳಿದಿರುವಿರಾ? ಜಪಾನ್, ಇಸ್ರೇಲ್ ಮುಂತಾದ ದೇಶಗಳಲ್ಲಿ ಹೇಗೆ ತಮ್ಮ ತಮ್ಮ ಭಾಷೆಗಳಲ್ಲೇ ಅವರು ವಿಜ್ಞಾನ-ತಂತ್ರಜ್ಞಾನ ಶಿಕ್ಷಣವನ್ನು ಕೊಡುತ್ತಾರೆಯೋ ಹಾಗೇ ಕರ್ನಾಟಕದಲ್ಲೂ ಕನ್ನಡದಲ್ಲೇ ಆಗಬೇಕು ಎಂದು ನಂಬಿರುವಿರಾ? ಅವರಿಗೆ ಹೇಗೆ ಕನಸಿನಲ್ಲಿಯೂ ಆಂಗ್ಲಭಾಷೆಯಲ್ಲಾಗಲಿ ಮತ್ತೊಂದು ಐರೋಪ್ಯ ಭಾಷೆಯಲ್ಲಾಗಲಿ ವಿಜ್ಞಾನ-ತಂತ್ರಜ್ಞಾನ ಶಿಕ್ಷಣವನ್ನು ತಮ್ಮ ದೇಶದಲ್ಲಿ ದೊರಕಿಸಿಕೊಡಬೇಕು ಎನಿಸಲಿಲ್ಲವೋ, ಹಾಗೆ ನಮ್ಮ ಹಿಂದಿನವರಿಗೇಕೆ ಅನ್ನಿಸಲಿಲ್ಲ ಎಂದು ಪ್ರಶ್ನಿಸಿರುವಿರಾ? ನಮ್ಮ ದೇಶದಲ್ಲಿ ಮಾತ್ರ ಏಕೆ ಆಂಗ್ಲಭಾಷೆಗೆ ತಲೆಬಾಗಿ ನಮ್ಮ ಭೂತ-ವರ್ತಮಾನ-ಭವಿಷ್ಯಗಳನ್ನು ಒಮ್ಮೆಗೇ ಹಾಳುಮಾಡಿಕೊಂಡುಬಿಟ್ಟೆವು ಎಂದು ಪ್ರಶ್ನಿಸಿರುವಿರಾ? ಇಷ್ಟೆಲ್ಲ ತಿಳಿದೂ ಈಗ ಕನ್ನಡಕ್ಕಾಗಿ ಹೋರಾಡುತ್ತಿರುವವರಲ್ಲಿ "ಕನ್ನಡಕ್ಕೆ ಸೇವೆ" ಎನ್ನುವುದಕ್ಕೂ "ತಮ್ಮ ಕೆಲಸ" ಎನ್ನುವುದಕ್ಕೂ ಬಹಳ ವ್ಯತ್ಯಾಸವಿದೆ ಎಂದು ನಂಬಿರುವಿರಾ? ಆದ್ದರಿಂದಲೇ ಅವರು ಕನ್ನಡದಲ್ಲಿ ಉನ್ನತ ಮಟ್ಟದ ವೈಜ್ಞಾನಿಕ, ತಾಂತ್ರಿಕ ಲೇಖನಗಳನ್ನು ರಚಿಸುತ್ತಿಲ್ಲ ಎಂದು ಅರಿತಿರುವಿರಾ?

ಒಟ್ಟಿನಲ್ಲಿ ಕನ್ನಡದಲ್ಲಿ ಉನ್ನತ ವಿಜ್ಞಾನ-ತಂತ್ರಜ್ಞಾನ ಶಿಕ್ಷಣ ದೊರಕಿಸಿಕೊಡದೆ ಇರುವುದಕ್ಕೆ ಯಾವ ನಿಜವಾದ ಕಾರಣವೂ ಇಲ್ಲ, ಕಾರಣವಿದ್ದರೆ ಅದು ನಮ್ಮ ಹಿಂದಿನವರ, ನಮ್ಮ ಆಲಸ್ಯವೇ ಕಾರಣ ಎಂದು ನಂಬಿರುವಿರಾ? ಏನೇ ಆಗಲಿ, ಇನ್ನೂ ಕಾಲ ಮಿಂಚಿಲ್ಲ, ಈಗಲೂ ತಿದ್ದಿಕೊಳ್ಳಬಹುದು ಎಂದು ನಂಬಿರುವಿರಾ? ಜಗತ್ತಿನಲ್ಲಿ ಇತರರು ಎಷ್ಟೇ ವಿಜ್ಞಾನ-ತಂತ್ರಜ್ಞಾನಗಳಲ್ಲಿ ಪ್ರಗತಿಯನ್ನು ಸಾಧಿಸಿರಲಿ, ನಾವು ಕನ್ನಡದಲ್ಲೇ ಅವರನ್ನು ಮೀರಿಸಬಹುದು ಎಂದು ನಂಬಿರುವಿರಾ? ಇದಕ್ಕೆ ಹೋರಾಡಬೇಕಾದವರು ನಾವು-ನೀವೇ ಎಂದು ತಿಳಿದಿರುವಿರಾ? ನಿಜವಾದ ಕನ್ನಡ ಚಳುವಳಿಯಲ್ಲಿ ಹೋರಾಡಲು ಸಿದ್ಧವಿರುವಿರಾ? ಹೋರಾಡುತ್ತಲೂ ಇದ್ದೀರಾ? ಹೋರಾಡುವ ಯೋಚನೆಯನ್ನಾದರೂ ಇಟ್ಟುಕೊಂಡಿರುವಿರಾ?

ಹೌದಾ? ಹಾಗಾದರೆ ಈಗ ನಿಮ್ಮ ಸಮಯ ಬಂದಿದೆ. "ಮುಂದಿನ ದಾರಿ" ಯೋಜನೆಗೆ ಸ್ವಾಗತ. ಇಲ್ಲವಾ? ಹಾಗಾದರೆ ಮುಂದಿನ ದಾರಿ ನೋಡಿಕೊಳ್ಳಿ, ನಿಮ್ಮಿಂದ ನಮಗೆ ಉಪಯೋಗವಿಲ್ಲ.

## ೨. "ಮುಂದಿನ ದಾರಿ" ಯೋಜನೆಯ ಗುರಿ

ಆಗಲೇ ಹೇಳಿದೆವಲ್ಲ...

ಕನ್ನಡದಲ್ಲಿ ವೈಜ್ಞಾನಿಕ ಶಿಕ್ಷಣ. ಕನ್ನಡದಲ್ಲಿ ತಾಂತ್ರಿಕ ಶಿಕ್ಷಣ. ಕನ್ನಡದಲ್ಲಿ ವೈದ್ಯಕೀಯ ಶಿಕ್ಷಣ. ಕನ್ನಡದಲ್ಲಿ ಬಿ.ಇ. ಕನ್ನಡದಲ್ಲಿ ಬಿ.ಎಸ್.ಸಿ. ಕನ್ನಡದಲ್ಲಿ ಎಂ.ಇ. ಕನ್ನಡದಲ್ಲಿ ಎಂ.ಟೆಕ್. ಕನ್ನಡದಲ್ಲಿ ಪಿ.ಎಚ್.ಡಿ. ಕನ್ನಡದಲ್ಲಿ ತಾಂತ್ರಿಕ ಸಂಸ್ಥೆಗಳು. ಕನ್ನಡ ತಾಂತ್ರಿಕ ವಿಶ್ವವಿದ್ಯಾಲಯ. ಕನ್ನಡದಲ್ಲೇ ಮೊಟ್ಟಮೊದಲು ಪ್ರಕಟವಾದ ವೈಜ್ಞಾನಿಕ, ತಾಂತ್ರಿಕ ಲೇಖನಗಳು. ವಿಶ್ವಮಟ್ಟದ ಕನ್ನಡ ವೈಜ್ಞಾನಿಕ ಪತ್ರಿಕೆಗಳು. ವಿಶ್ವಮಟ್ಟದ ಕನ್ನಡ ತಾಂತ್ರಿಕ ಪತ್ರಿಕೆಗಳು. ಕನ್ನಡದಲ್ಲೇ ವಿಜ್ಞಾನ-ತಂತ್ರಜ್ಞಾನ ಸಮ್ಮೇಳನಗಳು. ವಿಜ್ಞಾನ-ತಂತ್ರಜ್ಞಾನಗಳನ್ನು ಕಲಿಯುವಾಸೆಯಿಂದ ಕನ್ನಡವನ್ನು ಕಲಿಯಲು ನೂಕುನುಗ್ಗಲಲ್ಲಿರುವ ಇತರಭಾಷಿಕರು...

## ೩. ಗುರಿಮುಟ್ಟಲು ಉಪಾಯ

ಮೇಲಿನ ಗುರಿಯನ್ನು ಒಂದೆರಡು ದಿನಗಳಲ್ಲಿ ಸಾಧಿಸಲಾಗುವುದಿಲ್ಲ ಎನ್ನುವುದು ಸ್ಪಷ್ಟ. **ಆದರೆ ಇನ್ನು ಮೂವತ್ತು ವರ್ಷಗಳಲ್ಲಿ, ಎಂದರೆ ನಾವು ಕಣ್ಮುಚ್ಚುವ ಮೊದಲೇ ಇದು ಸಾಧ್ಯ** ಎಂದು ನಂಬಿದ್ದೇನೆ (ಇಷ್ಟೇ ಕಾಲ ಜಪಾನ್ ಕೂಡ ತೆಗೆದುಕೊಂಡಿದ್ದು; ಅವರು ಮೊದಲು ಆಂಗ್ಲ, ಫ್ರೆಂಚ್ ಉಪಾಧ್ಯಾಯರನ್ನು ಕರೆಸಿ ಪಾಠ ಕಲಿತುಕೊಂಡರು, ಇಪ್ಪತ್ತು ವರ್ಷಗಳಲ್ಲಿ ಎಲ್ಲವನ್ನೂ ತಮ್ಮ ಭಾಷೆಗೇ ತಂದು ಇನ್ನು ಹತ್ತು ವರ್ಷಗಳಲ್ಲಿ ಆಂಗ್ಲ-ಫ್ರೆಂಚ್ ಜನರೇ ಜಪಾನೀ ಭಾಷೆಯನ್ನು ವಿಜ್ಞಾನ-ತಂತ್ರಜ್ಞಾನಗಳಿಗೋಸ್ಕರ ಕಲಿಯುವಂತೆ ಮಾಡಿದರು!). ನಮ್ಮ ಗುರಿಯನ್ನು ಮುಟ್ಟಲು ಸರ್ಕಾರದಿಂದ ಯಾವ ಸಹಾಯವೂ ದೊರಕುವುದಿಲ್ಲ ಎಂದು ನಂಬಿ ಈ ಕೆಳಗಿನ ಅಂಶಗಳನ್ನು ಬರೆದಿರುತ್ತೇನೆ (ಏಕೆ? ಏಕೆಂದರೆ ಇತಿಹಾಸವನ್ನು ನೆನಪಿನಲ್ಲಿಟ್ಟುಕೊಳ್ಳಲೇಬೇಕಲ್ಲ!). ಸರ್ಕಾರದಿಂದ ನೆರವು ಸಿಕ್ಕರೆ ಕೆಲಸ ಸ್ವಲ್ಪ ಬೇಗ ಆಗಬಹುದು.

### *೩.೧. ಈ ಯೋಜನೆಗೆ ಬೇಕಾದ ಜನ*

''ಮುಂದೆ ಹೆಜ್ಜೆಯಿಡುವ ಮುನ್ನ'' ಎಂಬ ಅಂಕಣದಲ್ಲಿ ಹಾಕಿದ ಪ್ರಶ್ನೆಗಳಿಗೆಲ್ಲ ''ಹೌದು'' ಎಂದವರೇ ಇಲ್ಲಿ ಬೇಕಾಗಿರುವುದು. ಯಾವುದೇ ಸಂಶಯವಿರುವವರು, ಅಥವಾ ''ಇಲ್ಲ'' ಎಂದವರಿಗೆ ಇಲ್ಲಿ ಸ್ಥಾನವಿಲ್ಲ. ''ಹೌದು'' ಎಂದರೆ ಸಾಲದು, ಜೊತೆಗೆ ಈ ಕೆಳಗಿನ ಕ್ಷೇತ್ರಗಳಲ್ಲಿ ಒಂದು ಕ್ಷೇತ್ರದವರಾದರೂ ಆಗಿರಬೇಕು (ಇವುಗಳನ್ನು ಆದ್ಯತೆಯಾನುಸಾರವಾಗಿ ಪಟ್ಟಿ ಮಾಡಿಲ್ಲ):

೧. ವಿಜ್ಞಾನ ಕ್ಷೇತ್ರ
೨. ತಂತ್ರಜ್ಞಾನ ಕ್ಷೇತ್ರ
೩. ಗಣಿತ ಕ್ಷೇತ್ರ
೪. ವೈದ್ಯಕೀಯ ಕ್ಷೇತ್ರ
೫. ಅರ್ಥಶಾಸ್ತ್ರ ಕ್ಷೇತ್ರ
೬. ಕನ್ನಡ ಕ್ಷೇತ್ರ
೭. ಸಂಸ್ಕೃತ ಕ್ಷೇತ್ರ

''ಕ್ಷೇತ್ರದವರು'' ಎಂದರೇನು? ಉದಾಹರಣೆಗೆ ವಿಜ್ಞಾನ ಕ್ಷೇತ್ರದವರು ಎಂದರೆ ವಿಜ್ಞಾನವನ್ನು (ಮತ್ತಿನ್ನಾವುದರಲ್ಲಿ, ಆಂಗ್ಲಭಾಷೆಯಲ್ಲಿ) ಅಧ್ಯಯಿಸುತ್ತಿರುವ ವಿದ್ಯಾರ್ಥಿಗಳು, ಬೋಧಿಸುತ್ತಿರುವ ಶಿಕ್ಷಕರು, ಕೆಲಸ ಮಾಡುತ್ತಿರುವ/ಮಾಡಿ ನಿವೃತ್ತರಾಗಿರುವವರು. ನಿಮ್ಮ ಕ್ಷೇತ್ರದಲ್ಲಿ ನೀವೇನು ವಿಶ್ವವಿಖ್ಯಾತರಾಗಿರಬೇಕಾದ ಅವಶ್ಯಕತೆಯಿಲ್ಲ, ಆದರೆ ಆಗಿದ್ದರೆ ಬಹಳ ಸಂತೋಷ! ಮತ್ತೊಂದೇನೆಂದರೆ– **ನೀವು ಎಂದೂ ಕನ್ನಡಮಾಧ್ಯಮದಲ್ಲಿ ಅಧ್ಯಯನ ಮಾಡಿರದಿದ್ದರೂ ಪರವಾಗಿಲ್ಲ (ನಾನೂ ಅಂಥವನೇ!).**

ಹಾಗೆಯೇ ಕನ್ನಡ ಕ್ಷೇತ್ರದವರು ಎಂದರೆ ಕನ್ನಡವನ್ನು ಅಧ್ಯಯಿಸುತ್ತಿರುವ ವಿದ್ಯಾರ್ಥಿಗಳು, ಬೋಧಿಸುತ್ತಿರುವ ಶಿಕ್ಷಕರು, ಕನ್ನಡದಿಂದ ಅನ್ನ ಸಂಪಾದಿಸುತ್ತಿರುವ ಎಲ್ಲರೂ. ಸುಮ್ಮನೆ ಕನ್ನಡ, ಕನ್ನಡ ಎಂದು ಕೂಗಿಕೊಳ್ಳುವುದೊಂದನ್ನು ಮಾತ್ರ ಅರಿತಿರುವವರಿಗೆ ಇಲ್ಲಿಂದಲೇ ನಮಸ್ಕಾರ. ಕ್ಷೇತ್ರದವರು ಪ್ರಪಂಚದಲ್ಲಿ ಎಲ್ಲಿದ್ದರೂ ಈ ಯೋಜನೆಯಲ್ಲಿ ಭಾಗವಹಿಸಬಹುದು.

ಸಂಸ್ಕೃತ ಕ್ಷೇತ್ರದವರು ಬೇಕಾಗಿರುವುದು ಹೊಸ ಪದಗಳ ರಚನೆಗಾಗಿ. ಇವರು ಎಲ್ಲಿದ್ದರೂ ಇವರನ್ನು ಇತರ ಕ್ಷೇತ್ರದವರು ಸುಲಭವಾಗಿ ಸಂಪರ್ಕಿಸುವಂತಿರಬೇಕು. ಇದಕ್ಕಾಗಿ ಅಂತರ್ಜಾಲದ ಬಳಕೆ ಬಹಳ ಲಾಭಪ್ರದವಾಗುವುದು.

### ***೩.೨ ಮಾಡಬೇಕಾದ ಕೆಲಸ***

ಈ ಯೋಜನೆಯಲ್ಲಿ ಮಾಡಬೇಕಾದ ಕೆಲಸಗಳನ್ನು ಮೂರು ಹಂತಗಳಲ್ಲಿ ವಿಂಗಡಿಸಬಹುದು:

**ಮೊದಲನೆಯ ಹಂತ: ಜೂನ್ ೨೦೦೫ – ಡಿಸೆಂಬರ್ ೨೦೦೫**

ನಮ್ಮ ಕೆಲಸಕ್ಕೆ/ಅಧ್ಯಯನಕ್ಕೆ ಅತಿಮುಖ್ಯವಾದ ಒಂದು ವಿಷಯಕ್ಕೆ ಸಂಬಂಧಪಟ್ಟಿರುವ, ಕನ್ನಡದಲ್ಲಿ ಈಗಾಗಲೇ ಲಭ್ಯವಿರುವ/ಬಳಕೆಯಲ್ಲಿರುವ ವೈಜ್ಞಾನಿಕ/ತಾಂತ್ರಿಕ ಸಾಹಿತ್ಯವನ್ನು ಸಂಗ್ರಹಿಸಿ ಪರಿಶೀಲಿಸುವುದು, ತಪ್ಪುಗಳನ್ನು ತಿದ್ದುವುದು, ಕೊನೆಗೆ ಈಗಾಗಲೇ ಲಭ್ಯವಿರುವ ವೈಜ್ಞಾನಿಕ/ತಾಂತ್ರಿಕ ಪದಗಳ ಒಂದು ಪದಕೋಶವನ್ನು ತಯಾರಿಸುವುದು, ಅಂತರ್ಜಾಲದಲ್ಲಿ ಪ್ರಕಟಿಸುವುದು. ವೈಜ್ಞಾನಿಕ/ತಾಂತ್ರಿಕ ಸಾಹಿತ್ಯ ಎಂದರೆ:

- ಕನ್ನಡ ಮಾಧ್ಯಮದ ಶಾಲಾ ಪಠ್ಯಪುಸ್ತಕಗಳು
- ವಿವಿಧ ಪ್ರಕಾಶನಾಲಯಗಳು ಪ್ರಕಟಿಸಿರುವ ವಿಜ್ಞಾನ/ತಂತ್ರಜ್ಞಾನ ಪದಕೋಶಗಳು
- ಇತರೆ ಸಾಹಿತ್ಯ

ಯಾವುದೇ ಕ್ಷೇತ್ರವಾಗಲಿ, ಕನ್ನಡದಲ್ಲಿ ಹೆಚ್ಚು ಸಾಹಿತ್ಯ ಈಗಾಗಲೇ ಲಭ್ಯವಿಲ್ಲದಿರುವುದರಿಂದ ಈ ಹಂತವು ಆರು ತಿಂಗಳಿಗಿಂತ ಹೆಚ್ಚು ಕಾಲ ತೆಗೆದುಕೊಳ್ಳಲಾರದು. ಆದರೆ ಎಷ್ಟೋ ವಿಷಯಗಳಲ್ಲಿ ನಮಗೆ ತಿಳಿದಿರುವಷ್ಟು ಕಡಿಮೆ ಸಾಹಿತ್ಯವೇನಿಲ್ಲ ಎಂದು ಅರಿವಾಗುವುದೂ ನಿಜ (ಅದರಲ್ಲಿ ಎಷ್ಟು ತಪ್ಪೇ ಇರಲಿ, ಪ್ರಯತ್ನ ನಡೆದಿದೆ ಎಂದು ತಿಳಿಯುವುದಂತೂ ಖಂಡಿತ)!

ಡಿಸೆಂಬರ್ ೨೦೦೫ರ ಒಳಗೆ ೧೦ ಜನರು ತಮ್ಮ ಆಯ್ಕೆಯ ತಲಾ ಒಂದು ವಿಷಯಕ್ಕೆ ಸಂಬಂಧಪಟ್ಟಿರುವಂತೆ ಕನ್ನಡದಲ್ಲಿ ಈಗಾಗಲೇ ಲಭ್ಯವಿರುವ ಎಲ್ಲಾ ಸಾಹಿತ್ಯವನ್ನೂ ಪರಿಶೀಲಿಸಿ, ತಿದ್ದಿ, ತಲಾ ಒಂದೊಂದು ಪದಕೋಶಗಳನ್ನು ತಯಾರಿಸಿದರೆ ಈ ಹಂತದ ಗುರಿ ಮುಟ್ಟಿದಂತೆ.

## <u>ಎರಡನೆಯ ಹಂತ: ಜನವರಿ ೨೦೦೬ – ಡಿಸೆಂಬರ್ ೨೦೦೮</u>

ಈ ಹಂತದಲ್ಲಿ ನಮ್ಮ ಕೆಲಸಕ್ಕೆ/ಅಧ್ಯಯನಕ್ಕೆ ಅತಿಮುಖ್ಯವಾದ <u>ಒಂದು</u> ವೈಜ್ಞಾನಿಕ/ತಾಂತ್ರಿಕ ವಿಷಯವನ್ನು ಸಂಪೂರ್ಣವಾಗಿ ಕನ್ನಡದಲ್ಲೇ ಯೋಚನೆಮಾಡುವಂತಾಗುವುದು. ನೆನಪಿಡಿ, ‘‘ಕನ್ನಡಕ್ಕೆ ಅನುವಾದಿಸುವುದು’’ ಎಂದು ಹೇಳಲಿಲ್ಲ, ‘‘ಕನ್ನಡದಲ್ಲೇ ಯೋಚನೆಮಾಡುವಂತಾಗುವುದು’’ ಎಂದಿದೆ. ಅನುವಾದ ಮಾಡುತ್ತ ಹೋದರೆ ಅದರಿಂದ ನಾವು ಬಹಳ ದೂರ ಹೊರಟುಹೋಗುತ್ತೇವೆ. ಈ ಹಂತದಿಂದ ಅತಿಮುಖ್ಯವಾದ ಮತ್ತೊಂದು ಲಾಭವೇನೆಂದರೆ – ವಿಷಯಕ್ಕೆ ಸಂಬಂಧಿಸಿದ ಪ್ರತಿಯೊಂದು ಆಂಗ್ಲ ಪದವನ್ನೂ ನಾವು ಸೂಕ್ಷ್ಮವಾಗಿ ಪರಿಶೀಲಿಸಿ ಕನ್ನಡದ ಪದಗಳನ್ನು ಹುಡುಕುವುದರಿಂದ, ಕನ್ನಡ ಪದಗಳನ್ನು ಕಂಡುಹಿಡಿಯುವುದರಿಂದ ಮೂಲತಃ ಆ ವಿಷಯದಲ್ಲಿ ನಮ್ಮ ಪರಿಣಿತಿಯೂ ಹೆಚ್ಚುತ್ತದೆ ಎನ್ನುವುದರಲ್ಲಿ ಸಂದೇಹವೇ ಇಲ್ಲ. ಇದು ನನ್ನ ಸ್ವಂತ ಅನುಭವ. ಅಷ್ಟೇ ಅಲ್ಲದೆ, ವಿಷಯವನ್ನು ಒಂದು ಹೊಸ ಭಾಷೆಯಲ್ಲಿ (ಕನ್ನಡದಲ್ಲಿ) ಯೋಚಿಸುವುದರಿಂದ ಆಂಗ್ಲ ಪದಗಳನ್ನು ಎಷ್ಟೋ ಬಾರಿ ಅರ್ಥವಾಗದಿದ್ದರೂ ಉಪಯೋಗಿಸುವ ಗುಂಗಿನಿಂದ ಹೊರಬರುತ್ತೇವೆ, ಆಂಗ್ಲ ಪದಗಳು ಸೂಚಿಸುವ ತತ್ವಗಳು ನಿಜವಾಗಿ ಗೋಚರವಾಗುತ್ತವೆ. ಈ ಹಂತದ ಗುರಿಯೇನೆಂದರೆ ಎರಡು ವರ್ಷದ ಕೊನೆಯಲ್ಲಿ ನಾವು ಆರಿಸಿಕೊಂಡ <u>ಒಂದು</u> ವಿಷಯವನ್ನು ಸಂಪೂರ್ಣವಾಗಿ ಕನ್ನಡದಲ್ಲೇ ಯೋಚಿಸುವಂತಾಗುವುದು. ಇದು ಆಂಗ್ಲಭಷೆಯಲ್ಲೇ ಈ ವಿಷಯಗಳನ್ನು ಕಲಿತಿರುವ ನಮಗೆ ಮೊದಮೊದಲು ಸ್ವಲ್ಪ ಕಷ್ಟವಾಗಿ ತೋರಿದರೂ ಅದನ್ನು ಮೀರುವುದು ಸಾಧ್ಯ.

ಕನ್ನಡದಲ್ಲೇ ಯೋಚನೆ ಮಾಡುವುದು ಎಂದರೆ ಕನಿಷ್ಠಪಕ್ಷ ೯೫% ವೈಜ್ಞಾನಿಕ/ತಾಂತ್ರಿಕ ಪದಗಳು ಕನ್ನಡಕ್ಕೆ ಬಂದಿರಬೇಕು. ೫% ಕ್ಕಿಂತ ಹೆಚ್ಚು ಪದಗಳು ಆಂಗ್ಲ ಪದಗಳಾಗೇ ಉಳಿದಿದ್ದರೆ ಈ ಯೋಜನೆಯಲ್ಲಿ ಆ ವಿಷಯಗಳು ‘‘ಕನ್ನಡಕ್ಕೆ ಬಂದಿಲ್ಲ’’ ಎಂದೇ ನಾವು ಪರಿಗಣಿಸುವುದು. ಕನ್ನಡಕ್ಕೆ ವೈಜ್ಞಾನಿಕ/ತಾಂತ್ರಿಕ ಪದಗಳನ್ನು ತರುವುದು ಅಷ್ಟೇನು ಸುಲಭವಾದ ಕೆಲಸವಲ್ಲ (ಆಗಿದ್ದರೆ ಇಲ್ಲಿಯವರೆಗೆ ಯಾರಾದರೂ ಮಾಡೇ ಬಿಟ್ಟಿರುತ್ತಿದ್ದರು!), ಆದರೆ ಎಲ್ಲರೂ ಅಂದುಕೊಂಡಿರುವಷ್ಟು ಕಷ್ಟವಾದ ಕೆಲಸವೂ ಅಲ್ಲ. ಕನ್ನಡಕ್ಕೆ ಪದಗಳನ್ನು ತರುವುದರಲ್ಲಿ ಭಾಷಾತಜ್ಞರ (ಕನ್ನಡ/ಸಂಸ್ಕೃತ ಕ್ಷೇತ್ರದವರ) ಸಹಾಯ ಅತಿಮುಖ್ಯ.

ಈ ಹಂತದಲ್ಲಿ ನಮ್ಮದೇ ವಿಷಯವನ್ನು ಅಥವಾ ನಮ್ಮ ವಿಷಯಕ್ಕೆ ಅತಿಹತ್ತಿರವಾದ ವಿಷಯವನ್ನು ಆರಿಸಿಕೊಂಡಿರುವ ನಮ್ಮಲ್ಲಿ ಇತರರ ಜೊತೆಗೂಡಿ ವಿಷಯಗಳನ್ನೂ ಹೊಸ ಪದಗಳನ್ನೂ ಚರ್ಚಿಸುವುದರಿಂದ ಕೆಲಸ ಬಹುಬೇಗವಾಗಿಯೂ ಸುಗಮವಾಗಿಯೂ ಸಾಗುತ್ತದೆ ಎನ್ನುವುದು ಖಂಡಿತ. ಈ ಕೆಲಸಕ್ಕಾಗಿಯೇ ತಂಡಗಳನ್ನು ಕಟ್ಟಿಕೊಳ್ಳುವುದೂ ಲಾಭಪ್ರದ.

ವಿಷಯವನ್ನು ಸಂಪೂರ್ಣವಾಗಿ ಕನ್ನಡದಲ್ಲೇ ಯೋಚಿಸುವಂತಾದಮೇಲೆ ಆ ವಿಷಯವನ್ನು ಕುರಿತು ಕನ್ನಡದಲ್ಲಿ ಶಿಕ್ಷಣಸಾಮಗ್ರಿಯನ್ನು ತಯಾರಿಸುವುದು. ಸಾಮಗ್ರಿಯನ್ನು ತಯಾರಿಸುವಾಗಲೂ ಕೆಲವು ಸುಧಾರಣೆಗಳಾಗುವುದು ಅನಿವಾರ್ಯ.

ಹೀಗೆ ಮಾಡುತ್ತ ನಮ್ಮ ಕೆಲಸದಲ್ಲಿ/ಅಧ್ಯಯನದಲ್ಲಿ ಕನ್ನಡದ ದೀಪವು ನಿಧಾನವಾಗಿ ಬೆಳಗುವುದನ್ನು ಕಾಣುವುದೇ, ಕಂಡು ಸಂತೋಷ ಪಡುವುದೇ, ಪಟ್ಟು ಸಾಧಿಸಿರುವುದರ ಬಗ್ಗೆ ತೋರುವ ಅಸಂತುಷ್ಟ ಮನೋಭಾವವೇ, ಹೆಚ್ಚಿನ ಪ್ರಗತಿಗಾಗಿ ಹಂಬಲಿಸುವುದೇ ಈ ಹಂತದ ಗುರಿ.

ಡಿಸೆಂಬರ್ ೨೦೦೮ರ ಒಳಗೆ ೧೦ ಜನ ತಮ್ಮ ತಮ್ಮ ಕೆಲಸ/ಅಧ್ಯಯನಕ್ಕೆ ಸಂಬಂಧಿಸಿದ ಒಂದು ಅತಿಮುಖ್ಯ ವೈಜ್ಞಾನಿಕ/ತಾಂತ್ರಿಕ ವಿಷಯದ ಬಗ್ಗೆ ಸಂಪೂರ್ಣವಾಗಿ ಕನ್ನಡದಲ್ಲೇ ಯೋಚನೆಮಾಡುವಂತಾಗಿದ್ದು, ಅವುಗಳ ಬಗ್ಗೆ ಶಿಕ್ಷಣ ಸಾಮಗ್ರಿಗಳನ್ನೂ ತಯಾರಿಸಿದ್ದರೆ ಈ ಹಂತದ ಗುರಿ ತಲುಪಿದಂತೆ.

## <u>ಮೂರನೆಯ ಹಂತ: ಜನವರಿ ೨೦೦೯ – ಡಿಸೆಂಬರ್ ೨೦೧೦</u>

ಈ ಹಂತದಲ್ಲಿ ನಾವೇ ಸಿದ್ಧಪಡಿಸಿರುವ ಶಿಕ್ಷಣಸಾಮಗ್ರಿಯನ್ನು (ಅದು ಪುಸ್ತಕದಲ್ಲಿ ನಾವು ಗೀಚಿಕೊಂಡ ಸಾಲುಗಳೇ ಆಗಿರಲಿ, ಗಣಕಯಂತ್ರದ ಕಡತಗಳೇ ಆಗಿರಲಿ) ಉಪಯೋಗಿಸಿ ವಿದ್ಯಾರ್ಥಿಗಳಿಗೆ ನಾವು ಆರಿಸಿಕೊಂಡಿರುವ <u>ಒಂದು</u> ವಿಷಯವನ್ನು ಕನ್ನಡದಲ್ಲೇ ಹೇಳಿಕೊಡುವುದು, ಅವರಲ್ಲೂ ಈ ಯೋಜನೆಯಲ್ಲಿ ಆಸಕ್ತಿ ಮೂಡಿಸುವುದು, ಅವರನ್ನೂ ಈ ಯೋಜನೆಗೆ ಸೇರಿಸುವುದು. ಇದಕ್ಕಾಗಿ ಶಾಲಾ–ಕಾಲೇಜುಗಳ ಸಹಾಯವನ್ನು ಪಡೆಯುವುದು, ಉಪನ್ಯಾಸಗಳನ್ನು ಕೊಡುವುದು, ವಿದ್ಯಾರ್ಥಿಗಳೊಡನೆ ಸೇರಿ ಚರ್ಚಿಸುವುದು, ಅದರಿಂದಲೂ ಕನ್ನಡದಲ್ಲಿ ನಮ್ಮ ವಿಷಯಕ್ಕೆ ಸಂಬಂಧಿಸಿದ ಕನ್ನಡಸಾಹಿತ್ಯವನ್ನು ಸಮೃದ್ಧಗೊಳಿಸುವುದು.

ಡಿಸೆಂಬರ್ ೨೦೧೦ರೊಳಗೆ ೧೦ ನವೀನ ವಿಜ್ಞಾನ/ತಂತ್ರಜ್ಞಾನ ವಿಷಯಗಳ ಬಗ್ಗೆ ವಿಶ್ವವಿದ್ಯಾಲಯಗಳಲ್ಲಿ ಉತ್ತಮ ಗುಣಮಟ್ಟದ ಉಪನ್ಯಾಸಗಳು ಕೊಡಲ್ಪಟ್ಟರೆ ಈ ಹಂತದ ಗುರಿಯನ್ನು ತಲುಪಿದಂತೆ.

<u>**ನಾಲ್ಕನೆಯ ಹಂತ: ಜನವರಿ ೨೦೧೦ – ಡಿಸೆಂಬರ್ ೨೦೧೪**</u>

ಈ ಹಂತಕ್ಕೆ ಎಷ್ಟು ಜನ ತಲುಪಿರುತ್ತಾರೆ ಎಂದು ಈಗಲೇ ಹೇಳಲಾರದು. ಹತ್ತು ಜನ ಈ ಹಂತಕ್ಕೆ ತಲುಪಿದ್ದರೆ ಸಾಕು, ಸರ್ಕಾರವನ್ನೋ ಅಥವಾ ಯಾವುದಾದರೊಂದು ಖಾಸಗೀ ಸಂಸ್ಥೆಯನ್ನೋ ಸಮೀಪಿಸಿ ಒಂದು ಕನ್ನಡ ತಾಂತ್ರಿಕ ವಿಭಾಗವನ್ನು ನಮ್ಮ ವಿಶ್ವವಿದ್ಯಾಲಯಗಳಲ್ಲೊಂದರಲ್ಲಿ ಸ್ಥಾಪಿಸಬಹುದು. ಇದೇ ಹೆಮ್ಮರವಾಗಿ ಬೆಳೆದು ಒಂದು ವಿಶ್ವವಿದ್ಯಾಲಯವಾಗಬಹುದು...

ಜೊತೆಗೆ ಈ ಹಂತದಲ್ಲಿ ಉದ್ಯೋಗ ಕ್ಷೇತ್ರಕ್ಕೂ ಕಾಲಿಡಬೇಕು. ನಮ್ಮನ್ನು ‘‘ನೀವು ಕನ್ನಡದಲ್ಲಿ ಕೆಲಸ ಮಾಡುತ್ತೀರಿ’’ ಎಂದು ನಮ್ಮ ದೇಶದ ಕೆಲವರು ಪೆದ್ದರೆಂದು ಕಾಣುತ್ತಾರೆಂದು ನಂಬುವುದು ಸಾಧುವೇ (ಅವರಿಗೇನು ಗೊತ್ತು ನಮ್ಮ ಸಾಮರ್ಥ್ಯ?). ವಿಚಿತ್ರವೇನೆಂದರೆ ಹೊರದೇಶದವರು ನಮ್ಮನ್ನು ಭಾಷೆಯ ಆಧಾರದ ಮೇಲೆ ಕೀಳಾಗಿ ನೋಡುವುದಿಲ್ಲ (ಕೇವಲ ಆಂಗ್ಲಭಾಷೆ ಇವರಿಗೆ ಬರುತ್ತದೆ ಎನ್ನುವ ಕಾರಣದಿಂದ ಮಾತ್ರ ಕೆಲಸ ಕೊಡುತ್ತಿರುವ ಸಂಸ್ಥೆಗಳ ಕೆಲಸ ನಮಗೆ ಬೇಡವೂ ಬೇಡ!).

ಡಿಸೆಂಬರ್ ೨೦೧೪ರ ಒಳಗೆ <u>ಒಂದೇ ಒಂದು</u> ವಿಜ್ಞಾನ/ತಂತ್ರಜ್ಞಾನ ವಿಭಾಗ ಹುಟ್ಟಿದರೆ, **ಮತ್ತು** <u>ಒಂದೇ ಒಂದು</u> ಉತ್ತಮ ತಂತ್ರಜ್ಞಾನ–ಆಧಾರಿತ ಕಂಪನಿ ಹುಟ್ಟಿದರೆ ಈ ಹಂತದ ಗುರಿ ಮುಟ್ಟಿದಂತೆ.

## ೪. ಬನ್ನಿ, ನಿಮಗಾಗಿಯೇ ಕಾಯುತ್ತಿದ್ದಾಳೆ ಕನ್ನಡಾಂಬೆ!

ಈ ಯೋಜನೆಗೆ ಸೇರಿ, ಲಾಭ ಪಡೆಯಿರಿ, ಕನ್ನಡಕ್ಕಾಗಿ ದುಡಿದೂ ದುಡಿಯಿರಿ ಎಂದು ಕೈಮುಗಿದು ಕೇಳಿಕೊಳ್ಳುತ್ತೇನೆ. ಈ ಯೋಜನೆಯಲ್ಲಿ ಭಾಗವಹಿಸಲು ಇಷ್ಟವಿರುವವರು ನಿಮ್ಮ ಬಗ್ಗೆ ಈ ಕೆಳಗಿನ ಮಾಹಿತಿಯನ್ನು ಒಂದು ವಿ–ಅಂಚೆಯಲ್ಲಿ (ಈಮೇಲಿನಲ್ಲಿ) ನನಗೆ ಕಳುಹಿಸಿ:

೧. ಹೆಸರು
೨. ವಿಳಾಸ
೩. ಕನ್ನಡ ಮಾಧ್ಯಮದಲ್ಲಿ ಪಡೆದಿರುವ ಶಿಕ್ಷಣ
೪. ಆಂಗ್ಲ ಮಾಧ್ಯಮದಲ್ಲಿ ಪಡೆದಿರುವ ಶಿಕ್ಷಣ
೫. ಉದ್ಯೋಗ (ವಿವರವಾಗಿ)
೬.‘‘ಮುಂದಿನ ದಾರಿ’’ ಯೋಜನೆಯಲ್ಲಿ ನೀವು ಆರಿಸಿಕೊಂಡಿರುವ ವಿಷಯ
೭. ನಿಮ್ಮ ವಿಷಯಕ್ಕೆ ಹತ್ತಿರವಾಗಿರುವ ೫ ಇತರೆ ವಿಷಯಗಳು
೮. ಈಗಾಗಲೇ ನೀವು ಕನ್ನಡಕ್ಕೆ ವೈಜ್ಞಾನಿಕ/ತಾಂತ್ರಿಕ ವಿಷಯಗಳನ್ನು ತಂದಿದ್ದರೆ ಅದರ ಬಗ್ಗೆ ವಿವರ

ನನ್ನ ಮಾಹಿತಿ:

೧. ಹೆಸರು: ಬಾ.ರಾ.ಕಿರಣ
೨. ೧೦೧, ಎಚ್. ಎಂ. ವಿನ್ಸ್‌ಫೋರ್ಡ್, ೭ನೇ ಸಿ ಮುಖ್ಯರಸ್ತೆ, ಕೋರಮಂಗಲ ೩ನೇ ಹಂತ, ಬೆಂಗಳೂರು ೫೬೦೦೩೪
೩. ಕನ್ನಡಮಾಧ್ಯಮದಲ್ಲಿ ಯಾವ ಶಿಕ್ಷಣವನ್ನೂ ಪಡೆದಿಲ್ಲ, ಕನ್ನಡವನ್ನು ಎರಡನೇ ಭಾಷೆಯಾಗಿ ೨ನೇ ಪದವಿಪೂರ್ವ ತರಗತಿಯವರೆಗೆ ಕಲಿತಿದ್ದೇನೆ, ಅಷ್ಟೆ.
೪. ಎಂ.ಟೆಕ್. (ಐ.ಐ.ಟಿ. ದೆಹಲಿ)
೫. ಬೆಂಗಳೂರಿನಲ್ಲಿ ಟೆಕ್ಸಾಸ್ ಇನ್ಸ್‌ಟ್ರುಮೆಂಟ್ಸ್ ಕಂಪನಿಯಲ್ಲಿ ಹಿರಿಯ ತಂತ್ರಜ್ಞಾನಿಯಾಗಿ ಕೆಲಸ ಮಾಡುತ್ತಿದ್ದೇನೆ. ದೂರಸಂಪರ್ಕಕ್ಕೆ ಬೇಕಾದ ಸಮ್ಮಂಡಲಗಳನ್ನು (ಐ.ಸಿ.ಗಳನ್ನು) ನಾವು ತಯಾರಿಸುತ್ತೇವೆ. ನನ್ನ ಕೆಲಸ ೧೦೦% ತಾಂತ್ರಿಕ.

೬. ನಾನು ಆರಿಸಿಕೊಂಡಿರುವ ವಿಷಯಗಳು: ಸೂಚಕಗಳು ಮತ್ತು ವ್ಯವಸ್ಥೆಗಳು ("Signals and systems"), ಹಾಗೂ ನಿರಂತರ–ಮಂಡಲ–ವಿನ್ಯಾಸ ("Analog circuit design").
೭. ಮೇಲಿನ ವಿಷಯಗಳಿಗೆ ಹತ್ತಿರವಾಗಿರುವ ೫ ವಿಷಯಗಳು
   - ಗಣಿತ
   - ನಿಯಂತ್ರಣ ವ್ಯವಸ್ಥೆಗಳು
   - ಸಂಪರ್ಕ ತಂತ್ರಜ್ಞಾನ
   - ಸ್ವಲ್ಪಮಟ್ಟಿಗೆ ರಸಾಯನಶಾಸ್ತ್ರ
   - ಸ್ವಲ್ಪಮಟ್ಟಿಗೆ ಗಣಕಶಾಸ್ತ್ರ

೮. ಈಗಾಗಲೇ ನಾನು "ಸೂಚಕಗಳು ಮತ್ತು ವ್ಯವಸ್ಥೆಗಳು" ವಿಷಯದಲ್ಲಿ ಒಂದು ಚಿಕ್ಕ ಪಠ್ಯಪುಸ್ತಕವನ್ನು ಬರೆದಿದ್ದೇನೆ. ಶ್ರೀ. ಜಯಚಾಮರಾಜೇಂದ್ರ ತಾಂತ್ರಿಕ ವಿದ್ಯಾಲಯ (ಮೈಸೂರು) ಇಲ್ಲಿ ಉಪನ್ಯಾಸಗಳನ್ನು ಕೊಡಲು ಸಿದ್ಧನಾಗುತ್ತಿದ್ದೇನೆ.

## ೫. ಕೊನೆಯ ಮಾತು

ಈ ಯೋಜನೆಯನ್ನು ರೂಪಿಸಲೂ ನಿಮ್ಮ ಸಹಾಯ ಬೇಕು. ಇದು ಒಬ್ಬನಿಂದಾಗುವ ಕೆಲಸವಲ್ಲ, ಆದರೆ ಹತ್ತು ಜನರಿಂದ ಖಂಡಿತ ಸಾಧ್ಯ. ಯೋಜನೆಯ ರೂಪರೇಖೆಗಳನ್ನು ಎಳೆಯಲು ನನಗೆ ಸಹಾಯ ಬೇಕು. ಇನ್ನೊಬ್ಬರು ಮಾಡಲಿ, ಮಾಡದಿರಲಿ, ನಾನು ಕೆಲಸವನ್ನು ನಿಲ್ಲಿಸುವುದಿಲ್ಲ ಎನ್ನುವ ಛಲ ನಿಮ್ಮಲ್ಲಿರಬೇಕು. ನಮ್ಮ ಸುತ್ತಮುತ್ತಲಲ್ಲಿ ಕೇವಲ ಅಪ್ರಾಮಾಣಿಕತೆ, ಭ್ರಷ್ಟಾಚಾರಗಳು ನಡೆಯುತ್ತಿವೆ, ಏನೆಲ್ಲ ವಿಧಗಳಲ್ಲಿ ನಮ್ಮ ಮಾತೃಭಾಷೆಯ ಕೊಲೆಯಾಗುತ್ತಿದೆ....ಇಂತಹ ಪರಿಸ್ಥಿತಿಯಲ್ಲಿ ಕೊಳೆತು ನಾರುತ್ತಿರುವ ನೀರಿನಲ್ಲಿ ನಿಂತ ಕಮಲದಂತೆ ಈ "ಮುಂದಿನ ದಾರಿ" ಯೋಜನೆ. ಇದಕ್ಕಿಂತ ಸುಂದರವಾದ ಕನಸನ್ನು ನಾವು ಕಾಣಲಾರೆವು, ಕನ್ನಡ "ಚಳುವಳಿ"ಗಳಲ್ಲಿ ಇದನ್ನು ಮೀರಿಸುವ ಚಳುವಳಿಯಿಲ್ಲ.

ಈ ಯೋಜನೆಯನ್ನು ನಾವು ಸರಿಯಾಗಿ ನಡೆಸಿಕೊಟ್ಟರೆ <u>ಮಾತ್ರ</u> ನಮ್ಮ ತಾಯ್ನಾಡಿನ ಉದ್ಧಾರ, ಇಲ್ಲದಿದ್ದರೆ ಇಲ್ಲ ಎನ್ನುವುದು ಖಂಡಿತ. ಈ ಯೋಜನೆ ಸರಿಯಾಗಿ ನಡೆಯದಿದ್ದರೆ ನಮಗೆ ಕರ್ನಾಟಕದಲ್ಲೇ ಸ್ಥಾನವಿರುವುದಿಲ್ಲ, ಅನ್ನದ ಆಸೆಗಾಗಿ ಕನ್ನಡವನ್ನು ಸಂಪೂರ್ಣವಾಗಿ ಮರೆತುಬಿಡುತ್ತೇವೆ, ನಮ್ಮ ಮುಂದಿನ ಪೀಳಿಗೆಗೆ ಕನ್ನಡವೆನ್ನುವುದು ಭಾರವಾಗಿ ಕಾಣತೊಡಗುತ್ತದೆ, ನಮ್ಮ ಸಂಸ್ಕೃತಿಯನ್ನು ಸಂಪೂರ್ಣವಾಗಿ ಕಳೆದುಕೊಳ್ಳುತ್ತೇವೆ. ಭಾಷೆಯ ಆಧಾರದ ಮೇಲೆ ವಿಂಗಡಿಸಿ, ವಂಚಿಸಲ್ಪಟ್ಟವರು ಆಂಗ್ಲಭಾಷೆಯಿಂದ ಐಶಾರಾಮಿನ ಜೀವನವನ್ನು ಕಳೆಯುತ್ತಿರುವವರ ವಿರುದ್ಧ ದ್ವೇಷವನ್ನು ಕಟ್ಟಿಕೊಳ್ಳುತ್ತಾರೆ, ಒಂದು ದೊಡ್ಡ ಗೃಹಕಲಹವೇ ಆಗುವ ಸಂಭವವಿದೆ. ಮೊದಲನೇ ತರಗತಿಯೊಂದಲೇ ಆಂಗ್ಲಭಾಷೆಯನ್ನು ಕಲಿಸುತ್ತೇವೆ ಎಂದು ಹೊರಟಿರುವುದು ಮೂರ್ಖತನ, ಮಾತೃಭಾಷೆಯನ್ನು ಮೊದಲನೇ ತರಗತಿಯಿಂದಲೇ ಕೊಲ್ಲುವ ಪ್ರಯತ್ನವದು.

**ಕೇವಲ ಹತ್ತು ವರ್ಷಗಳ ಕಾಲ, ಹತ್ತು ಜನರು (ತಮ್ಮ ಬೇರೆ ಕೆಲಸದೊಂದಿಗೆ) ಚೆನ್ನಾಗಿ ದುಡಿದರೆ, ಕನ್ನಡಕ್ಕೆ ವಿಜ್ಞಾನ–ತಂತ್ರಜ್ಞಾನಗಳನ್ನು ತಂದರೆ ಈ ಭೂಮಿಯನ್ನು ನಾವು ಸ್ವರ್ಗವಾಗಿಸಬಲ್ಲೆವು.** "ಹತ್ತು ಜನ ತಾನೇ, ನಾನೇಕೆ ತಲೆ ಕೆಡಿಸಿಕೊಳ್ಳಲಿ!" ಎನ್ನಬೇಡಿ, ಮುಂದೆಬನ್ನಿ. ಇದರಲ್ಲಿ ನೀವು ಕಳೆದುಕೊಳ್ಳುವುದು ಏನೂ ಇಲ್ಲ. ಇರುವುದು ಲಾಭವೊಂದೇ. ಈ ಯೋಜನೆಯು ವೈಯಕ್ತಿಕ ಲಾಭವನ್ನು ಕಡೆಗಣಿಸಿ ಏನೋ ಇನ್ನೊಬ್ಬರಿಗೆ ಸೇವೆ ಮಾಡಿ ಎಂದು ಹೇಳುತ್ತಿಲ್ಲ, ಇದರಲ್ಲಿ ವೈಯಕ್ತಿಕ ಲಾಭವೆನ್ನುವುದು ತುಂಬಿ ತುಳುಕಾಡುತ್ತಿದೆ. ಇದಕ್ಕೆ ನಾನೇ ಉದಾಹರಣೆ. ಅದಕ್ಕೇ ಯಾರೇ ಮಾಡಲಿ ಮಾಡದಿರಲಿ, ಮುಂದುವರೆಯುತ್ತಿರುವುದು.

ಹಾಗಾದರೆ ಕಳುಹಿಸಿ ವಿ–ಅಂಚೆಯನ್ನು!